# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1

ಸಂಖ್ಯೆ: ಸಿ4(5)ವಿ.ಶಿ.ನೇ-32/01-02.

ದಿನಾಂಕ: 8-10-2003.

## ಸುತ್ತೋಲೆ

ವಿಷಯ:- ಸರ್ಕಾರಿ ಪ್ರೌಢಶಾಲೆಗಳಲ್ಲಿ, ಚಿತ್ರಕಲೆ, ಸಂಗೀತ, ನೃತ್ಯ, ಹೊಲಿಗೆ, ಮತ್ತು ಇನ್ನಿತರ ವೃತ್ತಿ ಶಿಕ್ಷಕರು ಕೈಗೊಳ್ಳಬೇಕಾದ ಬೋಧನಾ ಕಾರ್ಯ ಚಟುವಟಿಕೆಗಳು.

↔ ↔ ↔

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಿರುವ ವಿವಿಧ ವೃತ್ತಿ ಶಿಕ್ಷಕರಿಗೆ, ಸಾಕಷ್ಟು ಕೆಲಸದ ಹೊರೆ ಹಾಗೂ, ಬೋಧನಾ ವಿಷಯಗಳು, ಪರೀಕ್ಷಾ ವಿಷಯಗಳು ಆಗದೇ ಇರುವುದರಿಂದ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಹಲವಾರು ಕಾರ್ಯ ಕ್ರಮಗಳನ್ನು ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ.

### 1) ಚಿತ್ರಕಲಾ ಶಿಕ್ಷಕರು:

3 ವಿಭಾಗಗಳಲ್ಲಿರುವಲ್ಲಿ ಚಿತ್ರಕಲಾ ಶಿಕ್ಷಕರು ಇದ್ದಲ್ಲಿ, ಆ ಶಾಲೆಯಲ್ಲಿ ಸಾಕಷ್ಟು ಕಾರ್ಯಭಾರ ಇರುವುದಿಲ್ಲ. ಆದುದರಿಂದ ಅಂತಹ ಶಿಕ್ಷಕರನ್ನು ಹತ್ತಿರದ ಪ್ರೌಢಶಾಲೆಗಳಿಗೆ ನಿಯೋಜಿಸಬಹುದು.

1. ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರು ಅವರ ಶಾಲೆಯ ಕನಿಷ್ಟ 30 ವಿದ್ಯಾರ್ಥಿಗಳನ್ನು ಲೋಯರ್ ಮತ್ತು ಹೈಯರ್ ಪರೀಕ್ಷೆ ತೆಗೆದುಕಕೊಳ್ಳುವಂತೆ ಮಾಡಬೇಕು.
2. ವಿಜ್ಞಾನದಲ್ಲಿ ಅಕೃತಿಗಳನ್ನು ರಚಿಸ ಬೇಕಾಗಿರುವುದರಿಂದ, ವಿದ್ಯಾರ್ಥಿಗಳಿಗೆ ಚಿತ್ರ ಬರೆಸುವುದನ್ನು ರೂಢಿ ಮಾಡುವುದು.
3. ಚಿತ್ರ ಬರೆಯುವ ಸ್ಪರ್ಧೆಗಳಿಗೆ ತಪ್ಪದೇ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದು.

### 1. ಸಂಗೀತ ಶಿಕ್ಷಕರು:

1. ರಾಷ್ಟಗೀತೆಯನ್ನು ನಿಯಮಬದ್ಧವಾಗಿ ಸಾಮೂಹಿಕವಾಗಿ ಹಾಡಿಸುವುದನ್ನು ಕಲಿಸುವುದು.( ಜನ-ಗಣ-ಮನ ಮತ್ತು ವಂದೇ ಮಾತರಂ)
2. ಜೂನಿಯರ್ ಮತ್ತು ಸೀನಿಯರ್ ಪರೀಕ್ಷೆಗಳಿಗೆ ಕನಿಷ್ಟ 30 ಮಂದಿಯನ್ನು ಕಟ್ಟಿಸುವುದು.
3. ಕನ್ನಡ ಪಠ್ಯ ಪುಸ್ತಕದಲ್ಲಿನ ಭಾವಗೀತೆ, ಜಾನಪದ ಗೀತೆಗಳನ್ನು ಹಾಡಿಸುವುದು.
4. ಇನ್ನಿತರ ಪಠ್ಯೇತರ ಚಟುವಟಿಕೆ, ಪ್ರತಿಭಾ ಕಾರಂಜಿಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವುದು.
5. ಸಪ್ತ ತಾಳಗಳ ಪರಿಚಯ 5 ಜಾತಿ ಲಿಂಗಗಳು.
6. ಪುರಂದರ ದಾಸರು, ತ್ಯಾಗರಾಜರು, ಮುತ್ತು ಸ್ವಾಮಿ ಧೀಕ್ಷಿತರು ಹಾಗೂ ಶಾಮಾಶಾಸ್ತ್ರಿಗಳು, ಬಸವಣ್ಣ, ಅಕ್ಕಮಹಾದೇವಿ ಜೀವನ ಚರಿತ್ರೆ ಸಂಕ್ಷಿಪ್ತ ಪರಿಚಯ ಹಾಡು /ವಚನಗಳ ಪರಿಚಯ ಮಾಡಿಸುವುದು.

### 2. ಹೊಲಿಗೆ:

1. ಮಕ್ಕಳಿಗೆ ಕೈ ಹೊಲಿಗೆ ಹಾಕಿಸುವುದು,
2. ಪೇಪರ್ ಕಟಿಂಗ್

3. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು.
4. ಮಕ್ಕಳಿಗೆ ವಿವಿಧ ರೀತಿಯ ಕಸೂತಿ ಹೊಲಿಗೆಗಳನ್ನು ಹಾಕಿಸುವುದು.
5. ಉಡುಪಿನ ಬಗ್ಗೆ ವರ್ಣನೆಯನ್ನು ಕೊಟ್ಟು ಉಡುಪಿನ ಮಾದರಿಯನ್ನು ಕತ್ತರಿಸುವ ರೀತಿಯನ್ನು ತಿಳಿಯಪಡಿಸುವುದು.
6. ಮಾರ್ಜಕಗಳ ಪರಿಚಯ ಹಾಗೂ ಮಹತ್ವ ಅಯೋಡೆಟ್, ಲಿಕ್ವಿಡ್ ಸೋಪ ಪೌಡರ್ ತಯಾರಿಸುವುದು.
7. ಹಗ್ಗ ಅಥವಾ ಹಳೆಯ ಸೀರೆಯಿಂದ ಮಟರನ್ನು ತಯಾರು ಮಾಡುವ ವಿಧಾನವನ್ನು ತಿಳಿಯಪಡಿಸುವುದು.
8. ಕ್ರೋಶಾದಿಂದ ಹೆಣಿಗೆಯನ್ನು ಹೇಳಿಕೊಡುವುದು.
9. ಶಾಲೆಯಲ್ಲಿ ಮಕ್ಕಳಿಗೆ ಕಲಿಸಿರುವುದನ್ನು ಫೆಬ್ರವರಿ ತಿಂಗಳಲ್ಲಿ ಪ್ರದರ್ಶನ ಮಾಡಿ ಪ್ರತಿ ವಿದ್ಯಾರ್ಥಿಗಳು ವೀಕ್ಷಿಸುವಂತೆ ಅನುಕೂಲ ಮಾಡುವುದು.

### 4) ಇನ್ನಿತರ ವೃತ್ತಿ ಶಿಕ್ಷಕರು:

1. ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವಲ್ಲಿ ಸಹಕರಿಸುವುದು.
2. ಶಾಲಾ ಮೈದಾನದಲ್ಲಿ ಗಿಡಗಳನ್ನು ನೆಡೆಸುವುದು ಹಾಗೂ ಇತ್ಯಾದಿ ಕಾರ್ಯಗಳು ನಡೆಸುವುದು.

### ಮರಗೆಲಸದ ಶಿಕ್ಷಕರು

1. ಮರಕೆಲಸದ ಉಪಕರಣದ ಬಗ್ಗೆ ಪರಿಚಯ.
2. ವಿವಿಧ ಜಾತಿಯ ಮರ ಮುಟ್ಟುಗಳ ಪರಿಚಯ, ಮರದ ಬಣ್ಣ, ಎಳೆಗಳ ರಚನೆ ಶಕ್ತಿ, ತೂಕ ಮತ್ತು ಬೆಲೆ ಹಾಗೂ ಉಪಯೋಗ.
3. ಮರವನ್ನು ಹದಗೊಳಿಸುವುದರ ಗುರಿಗಳು ಮತ್ತು ಉದ್ದೇಶಗಳು.
4. ಮರ–ಮುಟ್ಟುಗಳ ಸಂರಕ್ಷತೆ ಪ್ರಾಮುಖ್ಯತೆ ಸಂರಕ್ಷಿಸುವ ವಿಧಾನಗಳು ಮರ ಮುಟ್ಟುಗಳ ಆಯ್ಕೆ, ಮರ ಮುಟ್ಟುಗಳಿಗೆ ತಗಲುವ ದೋಶಗಳು, ಕಂಡು ಬರುವ ದೋಶಗಳು.

### ತೋಟಗಾರಿಕೆ ಶಿಕ್ಷಕರು

1. ಸ್ವಾವಲಂಬನೆಯಲ್ಲಿ ತೋಟಗಾರಿಕೆ ವೃತ್ತಿಯ ಮಹತ್ವ ಹಾಗೂ ಸಲಕರಣೆಗಳು.
2. ಮಣ್ಣಿನ ರಚನೆ, ವಿಧಗಳು, ಪರೀಕ್ಷೆ, ಸಂರಕ್ಷಣೆ.
3. ಗೊಬ್ಬರದ ಮಹತ್ವ ಸಾವಯವ ಗೊಬ್ಬರ, ರಾಸಾಯನಿಕ ಗೊಬ್ಬರಗಳು. ಸಸ್ಯಾಭಿವೃದ್ಧಿ, ಸಸ್ಯದ ವಿವಿಧ ಭಾಗದ ಕಾರ್ಯಗಳ ಪರಿಚಯ.
4. ಕುಂಡದಲ್ಲಿ ಕೃಷಿಯ ಬಗ್ಗೆ ತಿಳಿಯಪಡಿಸುವುದು.
5. ಶಾಲೆಯಲ್ಲಿ ಕೈ ತೋಟ ನಿರ್ಮಾಣ ಮಾಡುವ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದು. /ಮಾಡಿಸುವುದು
6. ಔಷಧಿ ಸಸ್ಯಗಳ ಪರಿಚಯ ಹಾಗೂ ಬೆಳೆಸುವ ರೀತಿಯನ್ನು ಪ್ರಾಯೋಗಿಕವಾಗಿ ತಿಳಿಯಪಡಿಸುವುದು.
7. ಸಸ್ಯ ಸಂರಕ್ಷಣೆ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದು/ಮಾಡಿಸುವುದು.

### ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಚಿತ್ರಕಲಾ ಅಧ್ಯಾಪಕರ ಕರ್ತವ್ಯ

1. ಚಿತ್ರಕಲಾ ಅವಧಿಗಳಲ್ಲಿ ತಪ್ಪದೇ ತರಗತಿ ಹಾಜರಾಗುವುದು, ಪಾಠದ ಟಿಪ್ಪಣಿ ಕಡ್ಡಾಯವಾಗಿ ಬರೆದು ಮುಖ್ಯೋಪಾಧ್ಯಾಯರ ಅನುಮೋದನೆ ಪಡೆಯುವುದು.
2. ಚಿತ್ರಕಲೆಗೆ ಸಂಬಂಧಪಟ್ಟ ವಿಷಯಗಳಾದ ವಸ್ತು ಚಿತ್ರ, ಸರಳಗ್ಯೆ ಚಿತ್ರ, ನಕ್ಷೆ, ಪ್ರಕೃತಿ ಚಿತ್ರ, ಸ್ಮರಣ ಚಿತ್ರ, ಅಕ್ಷರ ಬರವಣಿಗೆ ಇವುಗಳನ್ನು ಖಡ್ಡಾಯವಾಗಿ ಪ್ರತಿ ತರಗತಿಗೆ ಐದು ಚಿತ್ರವನ್ನಾದರೂ ಮಾಡಸಲೇಬೇಕು. ವರ್ಷದಲ್ಲಿ ಪ್ರತಿ ತರಗತಿ ಮಕ್ಕಳು 30 ಚಿತ್ರವನ್ನಾದರೂ ಮಾಡಬೇಕು. 10 ರೇಖಾಗಣಿತ ಏನನ್ನಾದರೂ ಕಲಿಸಬೇಕು.

3. ಶಾಖಾ ಅವಧಿಯ ಹೊರತುಪಡಿಸಿ ಬಿಡು ಸಮಯ ಬಳಸಿಕೊಂಡು ಶಾಖಾ ವಿದ್ಯಾರ್ಥಿಗಳ ಸಂಖ್ಯೆಯ 10% ದಷ್ಟು ವಿದ್ಯಾರ್ಥಿಗಳನ್ನು ಹೈಯರ್ ಗ್ರೇಡ್ ಅಥವಾ ಲೋಯರ್ ಗ್ರೇಡ್ ಪರೀಕ್ಷೆಗೆ ಹಾಜರಾಗುವಂತೆ ಮಾಡುವುದು.
4. ಪಾಠೋಪಕರಣ ಸಾಧನವನ್ನು ಹಾಳಾಗದ ವಸ್ತುಗಳಿಂದ ಮಾಡಿಸುವುದು. ವರ್ಷದಲ್ಲಿ ಮಾಡಿಸಿದ ವಸ್ತುಗಳನ್ನು ವರ್ಷಕ್ಕೊಮ್ಮೆ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಾರ್ವಜನಿಕರ ಪ್ರದರ್ಶನ ಏರ್ಪಡಿಸುವುದು.
5. ಶಾಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಮರ್ಥರಾಗಿ ಭಾಗ ವಹಿಸುವಂತೆ ಮಾಡುವುದು.ಅದಕ್ಕಾಗಿ ಕಿರೀಟ, ಗಧೆ, ಆಯುಧ ವೇಷಭೂಷಣ, ಹಾರ ವಿದ್ಯಾರ್ಥಿಗಳೇ ತಯಾರಿಸುವಂತೆ ಪ್ರೇರೇಪಿಸುವುದು. ಮೇಕಪ್ ವಿಧಾನ ಕಲಿಸುವುದು. ಅಲಂಕಾರಿಕ ವಸ್ತು ಟೇಬಲ್–ವಾಜ್, ವೇದಿಕೆ ತಯಾರಿ, ಕಾರ್ಯಕ್ರಮ ಪಟ್ಟಿ, ರಂಗಸಜ್ಜಿಕೆ, ನಾಮಫಲಕ, ಸ್ವಾಗತ ಬ್ಯಾನರ್, ಮಕ್ಕಳಿಂದಲೇ ಮಾಡಿಸುವುದು.
6. ಪ್ರತಿ ಶಾಖೆಯಲ್ಲಿ ಮಕ್ಕಳು ರಚಿಸಿದ ಚಿತ್ರಗಳನ್ನು ಎಲ್ಲಾ ವಿದ್ಯಾರ್ಥಿಗಳು ವೀಕ್ಷಿಸಲು ಅನುಕೂಲವಾಗುವಂತೆ ಪ್ರದರ್ಶಿಸುವುದು. ಪ್ರತಿ ವಿದ್ಯಾರ್ಥಿ ತಿಂಗಳಿಗೊಂದಾದರೂ ಚಿತ್ರವನ್ನು ಬಿಡಿಸಲು ಪ್ರೇರೇಪಿಸುವುದು " ಚಿತ್ರ ಪ್ರದರ್ಶನ ಫಲಕ " ಖಡ್ಡಾಯ ಇರಲೇಬೇಕು.
7. ವಿಜ್ಞಾನ – ಸಮಾಜ ಅಭ್ಯಾಸಗಳಲ್ಲಿ ಬರುವ ವಿಷಯಕ್ಕೆ ಸಂಬಂಧಿಸಿದ ಮಾದರಿಗಳನ್ನು ವಿದ್ಯಾರ್ಥಿಗಳಿಂದ (ಚಾರ್ಟ್, ಥರ್ಮಾಕೋಲ್ – ಹಾಳಾಗದ ವಸ್ತು) ಮಾಡಿಸಿ ಜೋಪಾನವಾಗಿ ಇರಿಸಿ ಪಾಠ ಸಂದರ್ಭ ಬೋದನೋಪಕರಣವಾಗಿ ಬಳಸುವುದು.
8. ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಗಳಿಗೆ ತಪ್ಪದೇ ಹಾಜರಾಗುವಂತೆ ವಿದ್ಯಾರ್ಥಿಗಳಿಗೆ ತರಬೇತಿ ಕೊಟ್ಟು ಪ್ರೋತ್ಸಾಹಿಸುವುದು.

ವಿಶೇಷ ಶಿಕ್ಷಕರು ಹಾಗೂ ವೃತ್ತಿ ಶಿಕ್ಷಣದ ಬಗ್ಗೆ ಪಠ್ಯಪುಸ್ತಕ ನಿರ್ದೇಶನಾಲಯವು ಸಹ ಪಠ್ಯವಸ್ತುವಿನ ಬೋಧನಾ ವಿಷಯಗಳ ಸಿಲಬಸ್ ಪುಸ್ತಕವನ್ನು ಹೊರ ತಂದಿದೆ ಈ ಪುಸ್ತಕದ ಬೆಲೆಯ ರೂ.40/–ಗಳಿದ್ದು, ಶಾಲೆಯಲ್ಲಿ ಲಭ್ಯವಿರುವ ಯಾವುದೇ ನಿಧಿಯಿಂದ ಕೊಳ್ಳಲು ಅನುಮತಿ ನೀಡಿದೆ. ಹಲವು ಶಾಲೆಗಳಲ್ಲಿ ಹೊಲಿಗೆ ಶಿಕ್ಷಕರ ಹುದ್ದೆ, ಮಂಜೂರಾಗಿದ್ದು ಶಿಕ್ಷಕರೂ ಸಹ ನೇಮಕವಾಗಿರುತ್ತಾರೆ. ಆದರೆ ಹೊಲಿಗೆ ಯಂತ್ರಗಳಿಲ್ಲದಿರುವುದು ಕಂಡು ಬಂದಿದೆ. ಅಂತಹ ಪ್ರಕರಣಗಳಲ್ಲಿ ಶಾಲೆಯ ಸಂಚಿತ ನಿಧಿಯಿಂದ ನಿಯಮಾನುಸಾರ ಕನಿಷ್ಠ (2) ಎರಡು ಹೊಲಿಗೆ ಯಂತ್ರಗಳನ್ನು ಕೊಳ್ಳಲು ಅನುಮತಿ ನೀಡುವಂತೆ ಉಪನಿರ್ದೇಶಕರಿಗೆ ತಿಳಿಸಿದೆ. ಎಲ್ಲಾ ಶಾಲೆಗಳಲ್ಲೂ ವೃತ್ತಿ ಶಿಕ್ಷಕರಿಗೆ, ಅವರಿಗೆ ನಿಗಧಿಪಡಿಸಿರುವ ಬೋಧನಾ ಅವಧಿಗಳನ್ನು ನೀಡಿ, ಮಕ್ಕಳಲ್ಲಿ ವೃತ್ತಿ ಶಿಕ್ಷಣದ ಮೌಲ್ಯಗಳನ್ನು ಅರಿತುಕೊಳ್ಳುವಂತೆ ಮಾಡಲು ತಿಳಿಸಲಾಗಿದೆ. ಸಂಬಂಧಿಸಿದ ವಿಭಾಗದ ಶಿಕ್ಷಕರು, ಅವರು ಮಾಡುವ ಕೆಲಸದ ಬಗ್ಗೆ ದಾಖಲೆಗಳನ್ನು ಇಡದಿದ್ದಲ್ಲಿ ಅಂತಹವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ನಿರ್ದೇಶಕರು(ಪ್ರೌಢ ಶಿಕ್ಷಣ)

1. ಕಾರ್ಯದರ್ಶಿಗಳು, ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಸಾ.ಶಿ.ಇ. ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಹಾಗು ಬೆಳಗಾವಿ/ ಗುಲ್ಬರ್ಗ ವಿಭಾಗ ಇವರ ಸೂಕ್ತ ಕ್ರಮ.
2. ರಾಜ್ಯದ ಉಪ ನಿರ್ದೇಶಕರು/ಸಾ.ಶಿ.ಇ. ಇವರ ಸೂಕ್ತ ಕ್ರಮ.
3. ರಾಜ್ಯದ ಬಿ.ಇ.ಓ ಪ್ರಾಂಶುಪಾಲರು/ಮುಖ್ಯ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು

ಶ್ರೀ.\\Type11\d\Est-4\11467_03.doc